**ಸಿ.ಸಿ.ನಂ.852/2024**

**ಸಿಡಬ್ಲೂಃ 06 ಪಿಡಬ್ಲೂಃ 05**

**ಮೇಃ ಪ್ರಧಾನ ಹಿರಿಯ ಸಿವಿಲ್ ವ ಜೆ.ಎಮ್.ಎಫ್.ಸಿ. ನ್ಯಾಯಾಲಯ**

**ಬಸವನ-ಬಾಗೇವಾಡಿ**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಾಜಿ ಜೋಶಿ. |
| ತಂದೆಯ ಹೆಸರು | : | ಧರ್ಮಾಜಿ ಜೋಶಿ. |
| ವಯಸ್ಸು | : | 58 ವರ್ಷ. |
| ಉದ್ಯೋಗ | : | ಅಬಕಾರಿ ಉಪ ನಿರೀಕ್ಷಕರು, |
| ವಾಸಸ್ಥಳ | : | ಬಾಗಲಕೋಟೆ. |

**ಸಾಕ್ಷಿಯನ್ನು ಇಂದು ದಿನಾಂಕಃ 16-05-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**

**ಮುಖ್ಯ ವಿಚಾರಣೆ: ಎ.ಪಿ.ಪಿ.ಯವರಿಂದ**

1) ದಿನಾಂಕಃ 15-02-2024 ರಂದು ಚಾಸಾ-9 ರವರು ಈ ಪ್ರಕರಣದಲ್ಲಿ ಜಪ್ತುಪಡಿಸಿದ ಮುದ್ದೆಮಾಲುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಧಾರವಾಡ ಪ್ರಯೋಗಾಲಯಕ್ಕೆ ಕಛೇರಿ ಪತ್ರ ಕೊಟ್ಟಿರುತ್ತಾರೆ. ನಾನು ದಿನಾಂಕಃ 16-02-2024 ರಂದು ಬಸ್ ಮುಖಾಂತರ ಸದರಿ ಮುದ್ದೆಮಾಲುಗಳನ್ನು ಧಾರವಾಡ ಪ್ರಯೋಗಲಾಯಕ್ಕೆ ಹೋಗಿ ರಾಸಾಯನಿಕ ಪರೀಕ್ಷೆ ಮಾಡಿಸಿಕೊಂಡು ದಿನಾಂಕಃ 17-02-2024 ರಂದು ಮುದ್ದೆಮಾಲು ಹಾಗೂ ವರದಿ ಚಾಸಾ-9 ರವರಿಗೆ ನೀಡಿರುತ್ತೇನೆ. ಅದೇ ದಿನ ಚಾಸಾ-9 ರವರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಸದರಿ ರಾಸಾಯನಿಕ ವರಿದಿಯನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ-1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿ ಪರ ಶ್ರೀ.**SPL** ವಕೀಲರಿಂದ**:**

2) ರಾಸಾಯನಿಕ ಪರೀಕ್ಷೆಗಾಗಿ ಧಾರವಾಡಕ್ಕೆ ಹೋಗಲು ನನಗೆ ಲಿಖಿತವಾಗಿ ಚಾಸಾ-9 ರವರು ನೋಟೀಸು ನೀಡಿರುವುದಿಲ್ಲ ಎಂದರೆ ನಿಜ. ನಾನು ಧಾರವಾಡದ

ಪರೀಕ್ಷಾಲಯಕ್ಕೆ ಸಾರ್ವಜನಿಕ ವಾಹನಗಳಲ್ಲಿ ಪ್ರಯಾಣಿಸಿರುತ್ತೇನೆ. ಆದರೆ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಟಿಕೇಟ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ಚಾಸಾ-9 ರವರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ-1 ಕ್ಕೂ ಹಾಗೂ ಆರೋಪಿತಳಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಸಹ, ಚಾಸಾ-9 ರವರು ನಮ್ಮ ಮೇಲಾಧಿಕಾರಿಗಳು ಆಗಿರುವುದರಿಂದ, ಅವರ ಮಾತಿನಂತೆ ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಪ್ರಧಾನ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.